# ಮಕ್ಕಳಿಗೆ ಮ್ಯಾಗಿ, ಚಾಕ್ಲೇಟ್‌ನಂತೆ ಸಾಹಿತ್ಯವೂ ಇಷ್ಟವಾಗಬೇಕಲ್ಲವೇ?

## ರಾಜಶೇಖರ ಕುಕ್ಕುಂದಾ ಸಂದರ್ಶನ

**1** ಮಕ್ಕಳ ಸಾಹಿತ್ಯವನ್ನು ನಿಮ್ಮ ಬರವಣಿಗೆಯ ಪ್ರಮುಖ ಪ್ರಕಾರವನ್ನಾಗಿ ಆರಿಸಿಕೊಂಡಿರುವುದು ಏಕೆ?

**2** ಮಕ್ಕಳಿಗಾಗಿ ಬರೆಯುತ್ತಿರುವುದಕ್ಕೆ ನಿರ್ದಿಷ್ಟ ಕಾರಣಗಳೇನಾದರೂ ಇವೆಯೆ?

**3** ಕಥೆ–ಕವಿತೆ ಹಚ್ಚಿಕೊಂಡ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ ಅನ್ನಿಸಿದೆಯೆ? ಹೌದು ಎನ್ನುವುದಾದರೆ, ನಿರುತ್ಸಾಹದ ಸನ್ನಿವೇಶದಲ್ಲೂ ಬರೆಯುವ ಉತ್ಸಾಹವನ್ನು ನಿಮ್ಮಲ್ಲಿ ಉಳಿಸಿರುವ ಅಂಶ ಯಾವುದು?

**4** ಮಕ್ಕಳಿಗಾಗಿ ಬರೆಯುವವರು ಮುಖ್ಯವಾಗಿ ಯಾವ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡಿರಬೇಕು? ಹಾಗೆ ನಿಮ್ಮ ಮನಸ್ಸಿನಲ್ಲಿರುವುದು ಏನು?

**5** ಮಕ್ಕಳಿಗೆ ಬೇಕಾದುದು ಏನು? ಬರಹಗಾರ ಅದನ್ನು ಅರಿಯುವ ಕ್ರಮ ಹೇಗೆ?

**6** ಮಕ್ಕಳಿಗಾಗಿ ಬರೆಯುವುದರ ಬದಲು ದೊಡ್ಡವರಿಗಾಗಿ ಬರೆದಿದ್ದರೆ ಚೆನ್ನಾಗಿತ್ತು ಎಂದು ಯಾವಾಗಲಾದರೂ ಅನ್ನಿಸಿದೆಯೆ?

**7** ನಿಮ್ಮ ಬರವಣಿಗೆಗೆ ಸಂಬಂಧಿಸಿದಂತೆ ಈವರೆಗೆ ದೊರೆತಿರುವ ಅತ್ಯುತ್ತಮ ಪ್ರಶಂಸೆ ಯಾವುದು?

**1**

‘ಮಕ್ಕಳ ಸಾಹಿತ್ಯ’ವೇ ನನ್ನ ಬರವಣಿಗೆಯ ಪ್ರಮುಖ ಪ್ರಕಾರವಾಗಿರಲೆಂದು ನಾನು ಬಯಸಿರಲಿಲ್ಲ. ನಾನು ಬಾಲ್ಯದಲ್ಲಿ ಸಹಜವಾಗಿ ಬರೆಯಲು ಶುರು ಮಾಡಿದ್ದೆ. ನಾನು ಹೆಚ್ಚಾಗಿ ಬರೆದದ್ದು ಮಕ್ಕಳ ಪದ್ಯಗಳನ್ನೇ. ಬರೆದ ಹಾಗೆಯೇ ಅವು ಪತ್ರಿಕೆಗಳ ಮಕ್ಕಳ ಪುಟಗಳಲ್ಲಿ ಪ್ರಕಟವಾಗುತ್ತಾ ಹೋದವು. ಮಕ್ಕಳು ಇಷ್ಟಪಟ್ಟರು. ಹಿರಿಯರು ‘ನೀನು ಮಕ್ಕಳಿಗಾಗಿ ಚೆನ್ನಾಗಿ ಬರೆಯುತ್ತೀಯಾ, ಬರೆಯುತ್ತಿರು’ ಎಂದು ಹುರಿದುಂಬಿಸಿದರು. ಆಗಿನ ಕಾಲದ ಪಠ್ಯದ ಪದ್ಯಗಳಲ್ಲಿ ಚುಂಬಕದ ಸೆಳೆತ ಇತ್ತು. ಜಿ.ಪಿ. ರಾಜರತ್ನಂ, ಪಂಜೆ ಮಂಗೇಶರಾಯ, ದಿನಕರ ದೇಸಾಯಿ, ಸಿದ್ಧಯ್ಯ ಪುರಾಣಿಕರ ಮಕ್ಕಳ ಕವಿತೆಗಳು ನನಗೆ ಗುಂಗು ಹಿಡಿಸಿದವು. ಆ ಪದ್ಯಗಳನ್ನು ಮನಸೋ ಇಚ್ಛೆ ಹಾಡಿ ಆಡಿ ಕಾಲ ಕಳೆಯುತ್ತಿದ್ದ ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ‘ಪೆಪ್ಪರಮೆಂಟು’ ತಿಂದು ಬಾಯಿ ಚಪ್ಪರಿಸಿ ಖುಷಿಪಡುವ ಬಾಲ್ಯದ ದಿನಗಳಲ್ಲಿ ನನಗೆ ಪತ್ರಿಕೆ–ಪುಸ್ತಕಗಳ ಒಡನಾಟದ ರುಚಿ ಹತ್ತಿತು. ‘ಚಂದಮಾಮ’, ‘ಬಾಲಮಿತ್ರ’, ‘ಬೊಂಬೆಮನೆ’, ‘ಪುಟಾಣಿ’ ಮಾಸಪತ್ರಿಕೆಗಳಲ್ಲದೇ ‘ಸುಧಾ’, ‘ಮಯೂರ’, ‘ಪ್ರಜಾಮತ’, ‘ಪ್ರಜಾವಾಣಿ’, ‘ಸಂಯುಕ್ತ ಕರ್ನಾಟಕ’ ಸೇರಿದಂತೆ ವಿವಿಧ ನಿಯತಕಾಲಿಕೆಗಳಲ್ಲಿಯ ಮಕ್ಕಳ ಪುಟಗಳು ನನ್ನ ಮನಸ್ಸನ್ನು ಸೆರೆಹಿಡಿದಿದ್ದವು. ನಾನಾಗ ಕಲಬುರ್ಗಿ ಜಿಲ್ಲೆಯ ಸೇಡಂನಲ್ಲಿದ್ದೆ. ಅದು ಶೈಕ್ಷಣಿಕವಾಗಿ